**ಇಂದು ದಿನಾಂಕಃ 18-03-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ರಿಂದ 4ನೇ ಪ್ರತಿವಾದಿ ಪರವಾಗಿ ಶ್ರೀ MSS ವಕೀಲರಿಂದಃ-**

ಪ್ರತಿವಾದಿಯರ ಅಡ್ಡಹೆಸರು ಬಿರಾದರ ಎಂದು ಇರುತದೆ. ಗಣಾಪುರದಲ್ಲಿ ಬಿರಾದರ ಎಂಬ ಒಂದು ಕುಟುಂಬ ಮಾತ್ರ ಇದೆ ಎಂದರೆ ಸರಿ. ಬಿರಾದರ ಕುಟುಂಬ ನಿಜಾಮರ ಕಾಲದಿಂದಲೂ ಮುಂಚಿತವಾಗಿ ಇದೆ ಎಂದರೆ ಸರಿ. ಮೊದಲು ಬಿರಾದರ ಕುಟುಂಬದವರು ತೆರಿಗೆ ಪಡೆಯುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಅಜ್ಜನ ಹೆಸರು ಶಿವಪ್ಪ. ನನ್ನ ಅಜ್ಜನಿಗೆ ಒಟ್ಟು 5 ಜನ ಮಕ್ಕಳು. ಅವರ ಹೆಸರು ನಾಗಪ್ಪ, ಶಿವಶರಣಪ್ಪ, ವೀರಭದ್ರಪ್ಪ, ಬಸವಂತರಾವ ಮತು ನಿಂಬೆಣಪ್ಪ ಇದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಅಂಜುಮನ ವ್ಯವಸಾಯ ಸಂಘದ ಕಾರ್ಯದರ್ಶಿಗಳು ಆಗಿದ್ದರು. ನನ್ನ ತಂದೆ ಗ್ರಾಮ ಪಂಚಾಯತಿ ಸದಸ್ಯರು ಆಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ವಿದ್ಯಾವಂತರು ಎಂದರೆ ಸರಿ. ಗಣಾಪುರ ಗ್ರಾಮದಲ್ಲಿ ನನ್ನ ಅಜ್ಜನಿಗೆ 35 ರಿಂದ 36 ಎಕರೆ ಜಮೀನು ಮತ್ತು 3 ಮನೆಗಳು ಇದ್ದವು. ಸದರಿ ಜಮೀನಿನ ಸರ್ವೆ ಸಂಖ್ಯೇ ಮತ್ತು ಮನೆಗಳ ಸಂಖ್ಯೆಃ ನನಗೆ ಹೆಳಲು ಬರುವುದಿಲ್ಲ. ಗ್ರಾಮಕ್ಕೆ ಹೊಂದಿಕೊಂಡು ನನ್ನ ಅಜ್ಜನ ಒಂದು ಜಮಿನು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿಯೇ ನನ್ನ ಅಜ್ಜ ಮತ್ತು ನನ್ನ ಅಜ್ಜನ ಮಕ್ಕಳು ವಾಸವಿದ್ದರು ಎಂದರೆ ಸರಿ. ಈಗ ನನ್ನ ತಂದೆ ಮತ್ತು ಅವರ ಸಹೋದರರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಾಲುವಿಭಾಗ ಆಗಿ ಈಗ 19 ವರ್ಷ ಆಗಿದೆ. ಸದರಿ ಪಾಲು ವಿಭಾಗದ ಪ್ರಕಾರ ಆಸ್ತಿಗಳು ಅವರವರ ಹೆಸರಿನಲ್ಲಿ ವರ್ಗಾವಣೆ ಆಗಿವೆ. ಪಾಲು ವಿಭಾಗ ಆದಾಗ ಯಾವುದೇ ದಾಖಲೆ ಬರೆದಿದ್ದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಾಲು ವಿಭಾಗ ಆದಂತೆ ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಪಾಲು ವಿಭಾಗ ಆದಂತೆ ಆಸ್ತಿಗಳು ವಿಸ್ತೀರ್ಣ ತೋರಿಸಲು ದಾಖಲೆಗಳು ನನ್ನ ಹತ್ತಿರ ಇವೆ.

ದಾವಾ ಆಸ್ತಿಯು ಪಾಲಿನಲ್ಲಿ ಬಸವಂತಪ್ಪ, ನಿಂಬೆಣಪ್ಪ ಮತ್ತು ವೀರಭದ್ರಪ್ಪ ರವರಿಗೆ ಬಂದಿರುತ್ತದೆ. ಬಸವಂತಪ್ಪ, ನಿಂಬೆಣಪ್ಪ ಮತ್ತು ವೀರಭದ್ರಪ್ಪ ರವರ ಪಾಲಿಗೆ ಬಂದಿರುವ ಮನೆಯ ವಿಸ್ತೀರ್ಣ ತೋರಿಸುವ ದಾಖಲೆ ನನ್ನ ಹತ್ತಿರ ಇಲ್ಲ ಎಂದರೆ ಸರಿಯಲ್ಲ. ಬಸವಂತಪ್ಪ, ನಿಂಬೆಣಪ್ಪ ಮತ್ತು ವೀರಭದ್ರಪ್ಪ ರವರ ಪಾಲಿಗೆ ಬಂದಿರುವ ಆಸ್ತಿಗಳನ್ನು ತೋರಿಸಲು ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಾವಾ ಮನೆ ವಿಸ್ತೀರ್ಣ ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿದೇನೆ. ದಾವಾ ಮನೆಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ದಾವಾ ಆಸ್ತಿ ಖುಲ್ಲಾ ಜಾಗ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ PDO ರವರ ಹತ್ತಿರ ಇದೆ ನನ್ನ ಹತ್ತಿರ ಇಲ್ಲ ಎಂದು ನುಡಿಯುತ್ತಾರೆ.

ವೀರಭದ್ರಪ್ಪ ಮತ್ತು ನಿಂಬೆಣಪ್ಪ ಯಾವ ಮನೆಯಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ರ ದಾಖಲೆ PDO ರವರು ನೀಡಿರುತ್ತಾರೆ. ನಿಪಿ 1 ರಲಿ ಮನೆ ಕಟ್ಟಡ ಮತ್ತು ಜಾಗ ಎಂದು ತಿದ್ದುಪಡಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಪಟ್ಟಂತೆ ಸ್ಥಳವನ್ನು ಕಬಳಿಸಲು ನಿಪಿ 2 ರಲ್ಲಿ ಮನೆ ಕಟ್ಟಡ ಮತ್ತು ಜಾಗ ಎಂದು ತಿದ್ದುಪಡಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈಗಲೂ ಸಹ ಮನೆ ಸಂಖ್ಯೆಃ 1-22 ರ ಪಂಚಾಯತಿ ದಾಖಲೆಗಳು ಮನೆ ಕಟ್ಟಡ ಎಂದು ಮಾತ್ರ ಉಲ್ಲೇಖವಿದೆ ಮತ್ತು ಖುಲ್ಲಾ ಜಾಗ ಎಂದು ಉಲ್ಲೇಖವಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತಿದೆ ಎಂದು ನುಡಿಯುತ್ತಾರೆ.

ನಾವು ವಾಸವಿರುವ ಮನೆ ಸಂಖ್ಯೆಃ 1-22 ರ ಉತ್ತರ ದಿಕ್ಕಿಗೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ನಾವು 3 ಜನರು ವಾಸವಿದ್ದೇವೆ. ಮನೆ ಸಂಖ್ಯೆಃ 1-22 ರ ಚರಂಡಿ ನೀರು ದಕ್ಷಿಣ ದಿಕ್ಕಿಗೆ ಹೋಗುತದೆ ಎಂದರೆ ಸಾಕ್ಷಿ ಉತ್ತರ ದಿಕ್ಕಿಗೆ ಹೋಗುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆಯ ದಕ್ಷಿಣ ದಿಕ್ಕಿಗೆ ನಾಲಾ ಇದೆ ಎಂದರೆ ಸರಿಯಲ್ಲ. ಸದರಿ ನಾಲೆಯ ಮುಂದೆ ಪಶ್ಚಿಮ ದಿಕ್ಕನಿಂದ ಪೂರ್ವಕೆ ಹೋಗುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆ ಮತ್ತು ನಮ್ಮ ಮನೆಯ ಮದ್ಯ ಇರುವ ಸಂದಿಯಲ್ಲಿ ಸಿತಾಫಲ ಗಿಡ ಮತ್ತು ಬೇವಿನ ಗಿಡ ಇದೆ ಎಂದರೆ ಸರಿ. ಸದರಿ ಸಿತಾಫಲ ಗಿಡ ಮತ್ತು ಬೇವಿನ ಗಿಡ ಮದ್ಯದಲ್ಲಿ ನಾಲಾ ಇದೆ ಎಂದರೆ ಸರಿ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಯ ಬಿದ್ದುಹೋದ ಮನೆ ಇದೆ ಎಂದರೆ ಸರಿ. ಪ್ರತಿವಾದಿಯ ಆಸ್ತಿ ವಿಸ್ತೀರ್ಣ ಪೂರ್ವ ಪಶ್ಚಿಮ 47 ಅಡಿ ಮತ್ತು ಉತ್ತರದಿಂದ ದಕೀಣಕ್ಕೆ 90 ಅಡಿ ಇದೆ ಎಂದರೆ ಸಾಕ್ಷಿ 60 ಅಡಿ ಅಗಲ ಮತ್ತು 90 ಅಡಿ ಉದ್ದ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು 47 X 90 ಅಡಿ ಆಸ್ತಿಯಲ್ಲಿ ಪ್ರತಿವಾದಿಯರು ಈಗಲೂ ಸಹ ತಿಪೆಗುಂಡಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಮುಖ್ಯಬಾಗಿಲು ಉತ್ತರ ದಿಕ್ಕಿಗೇ ಇದೆ ಎಂದರೆ ಸರಿ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಯಾವುದೇ ಬಾಗಿಲು ಅದವಾ ಕಿಟಕಿ ಇಲ್ಲ ಎಂದರೆ ಸಾಕ್ಷಿ ಒಂದು ಬಾಗಿಲು ಇದೇ ಎಂದು ನುಡಿಯುತ್ತಾರೆ. ಈ ರೀತಿ ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಒಂದು ಬಾಗಿಲು ಇದೆ ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ಮನೆ ಮತ್ತು ಪ್ರತಿವಾದಿ ಮನೆ ಮದ್ಯ ಚರಂಡಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಸಂಖ್ಯೆ 1-22 ರ ಚೆಕ್ಕುಬಂದಿ ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿಲ್ಲ. ಮನೆ ಸಂಖ್ಯೆ 1-22 ರ ಪೂರ್ವ ದಿಕಿಗೆ ಹಣಮಂತರಾವ ರವರ ಮನೆ ಇದೆ ಎಂದರೆ ಸರಿ. ಹಣಮಂತ ರಾವ ರವರ ಮನೆಯ ಪೂರ್ವಕ್ಕೆ 2ನೇ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ಪ್ರತಿವಾದಿಯರಿಗೆ ಸಂಬಂಧಪಟ್ಟ ಎಷ್ಟು ಮನೆಗಳು ಇವೆ ಎಂದು ಪ್ರಶ್ನಿಸಿದಾಗ ಸಾಕ್ಷಿ 6ನೆ ಪ್ರತಿವಾದಿಗೆ ಸಂಬಂಧಪಟ್ಟ ಒಂದು ಮನೆ, ಈರಣ್ಣ ರವರಿಗೆ ಸಂಬಂಧಪಟ್ಟ ಒಂದು ಮನೆ ಹಾಗೂ 2ನೇ ಪ್ರತಿವಾದಿಗೆ ಸಂಬಂದಪಟ ಒಂದು ಮನೆ ಇದೆ ಎಂದು ನುಡಿಯುತ್ತಾರೆ.

ತಕರಾರಿಗೆ ಒಳಪಟ್ಟ ದಾವಾ ಆಸ್ತಿ ಸಂಖ್ಯೇ 1-23 ಇದೆ ಎಂದರೆ ಸಾಕ್ಷಿ 1-22 ಇದೆ ಎಂದು ನುಡಿಯುತ್ತಾರೆ. 1-22 ಕಟ್ಟಡವಾದ ಮನೆ ಮತ್ತು 1-23 ಖುಲ್ಲಾ ಜಾಗ ಎಂದರೆ ಸಾಕ್ಷಿ 1-22 ರಲ್ಲಿ ಮನೆ ಇಲ್ಲ ಮತ್ತು ಖುಲ್ಲಾ ಜಾಗ ಅಷ್ಟೇ ಇದೆ ಎಂದು ನುಡಿಯುತ್ತಾರೆ. 1-23 ದೊಡ್ಡ ಜಾಗ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಪಟ್ಟಂತೆ ಮನೆ ಸಂಖೆಃ 1-20, 1-21, 1-23 ಮತ್ತು 1-24 ಇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2ನೇ ಪ್ರತಿವಾದಿಯ ತಂದೆ ಹೆಸರು ನಾಗಪ್ಪ ಇದೆ. ನಾಗಪ್ಪ ತಂದೆಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ. 6ನೇ ಪ್ರತಿವಾದಿಯ ಅಜ್ಜನ ಹೆಸರು ಬಂಡಪ್ಪ ಎಂದರೆ ಸರಿ. ಸದರಿ ಬಂಡಪ್ಪ ರವರಿಗೆ 3 ಜನ ಮಕ್ಕಳು ಮತ್ತು ಅವರ ಹೆಸರು ಈರಪ್ಪ, ಸಂಗಪ್ಪ ಮತು ತಿಪ್ಪಣ್ಣ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖ್ಯೇ 1-23 ಈರಪ್ಪ ಮತು ಸಂಗಪ್ಪ ರವರ ಪಾಲಿಗೆ ಬಂದಿದೆ ಮತು ಅವರು ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಮನೆ ಮತ್ತು ಪ್ರತಿವಾದಿಗಳ ಮನೆ ಮದ್ಯ ಸಂದಿ ವಿಸ್ತೀರ್ಣ ಎಷ್ಟು ಎಂದು ಪ್ರಶ್ನಿಸಿದಾಗ ಸಾಕ್ಷಿ ಸಂದಿ ಇಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಗಿಡಗಳು ಸದರಿ ಸಂದಿಯಲ್ಲಿ ಇವೆ ಎಂದು ಸೂಚಿಸಿದಾಗ ಸಾಕ್ಷಿ ಅಲ್ಲಿ ಸಂದಿ ಇಲ್ಲ ಮತ್ತು ಸದರಿ ಗಿಡಗಳು ನಮ್ಮ ಜಾಗದಲ್ಲಿವೆ ಎಂದು ನುಡಿಯುತ್ತಾರೆ. ಸಂಗಪ್ಪ ದೇವನೂರು ಮತ್ತು ಪ್ರತಿವಾದಿ ಮನೆ ಮದ್ಯ ಇರುವ ಗೋಡೆ 3.5 ಫೀಟ ಎತ್ತರ ಇದೆ ಎಂದರೆ ಸರಿ. ಪ್ರತಿವಾದಿಯರ ಮನೆ ಸಂಖ್ಯೆಃ 1-23 ಹಾಗೂ ಚಂದ್ರಶೇಖರ ರವರ ಮನೆ ಮದ್ಯ 3 ಫೀಟ ಸಂದಿ ಇದೆ ಎಂದರೆ ಸರಿಯಲ್ಲ. ರವಿ ರವರ ಅಂಗಡಿಯಿಂದ ಉತ್ತರ ದಿಕ್ಕಿಗೆ ಇರುವ ಸಂದಿಯಲ್ಲಿ ಲೈಟಿನ ಕಂಬ ಇದೆ ಎಂದರೆ ಸರಿ. ಸದರಿ ಸಂದಿ ಪೂರ್ವಕ್ಕೆ ಹೋಗುತ್ತದೆ ಎಂದರೆ ಸಾಕ್ಷಿ ಇಲ್ಲ ಆದರೆ ಅಲ್ಲಿ ಚರಂಡಿ ಇದೆ ಎಂದು ನುಡಿಯುತ್ತಾರೆ.

ಚಂದ್ರಶೇಖರ ರವರ ತಿಪ್ಪಣ್ಣನ ವಾರಸುದಾರರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಮತು 2ನೇ ಪ್ರತಿವಾದಿಯರು ಈರಪ್ಪನ ವಾರಸುದಾರರು ಎಂದರೆ ಸಾಕ್ಷಿ ಈರಪ್ಪ ರವರ ಗೌತಿತಲ್ಲ ಆದರೆ ಅವರು ನಾಗಪ್ಪನ ಮಕ್ಕಳು ಎಂದು ನುಡಿಯುತ್ತಾರೆ. 3 ರಿಂದ 6ನೇ ಪ್ರತಿವಾದಿಯರು ಸಂಗಪ್ಪನ ವಾರಸುದಾರರು ಎಂದರೆ ಸರಿ.

ಮನೆ ಸಂಖ್ಯೆಃ 1-23 ರ ದಕಿಣ ದಿಕಿಗೆ ರಸ್ತೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖ್ಯೆಃ 1-23 ರ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ 3ನೇ ಪ್ರತಿವಾದಿ ಕಾರಕುಟ್ಟುವ ಗಿರಿಣಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖೆಃ 1-23 ರಲ್ಲಿ 3ನೇ ಪ್ರತಿವಾದಿಯ ಕಾರಕುಟ್ಟುವ ಗಿರಿಣಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ಪಂಚಾಯತಿಯಿಂದ ಪರವಾನಿಗೆ ಪಡೆದು ಕಾರಕುಟ್ಟುವ ಗಿರಿಣಿ ಹಾಕಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಚಂದ್ರಶೇಖರ ರವರ ಮನೆ ಉತ್ತರ ದಿಕ್ಕಿಗೆ ಸಂಗನಬಸಪ್ಪ ರವರ ಬಿದ್ದ ಮನೆ ಇದೆ ಎಂದರೆ ಸರಿ. ಸದರಿ ಸಂಗನಬಸಪ್ಪ ರವರ ಬಿದ್ದಮನೆಯ ಉತ್ತರ ದಿಕ್ಕಿಗೆ ಭೀಮರಾವ ರವರ ಬಿದ್ದ ಮನೆ ಇದೆ ಎಂದರೆ ಸರಿ. ಸದರಿ ಬಿದ್ದ ಮನೆಯ ಪಶ್ಚಿಮ ದಿಕ್ಕಿಗೆ ದಾರಿ ಇದೆ ಎಂದರೆ ಸರಿ. ಮನೆ ಸಂಖ್ಯೆಃ 1-23 ರ ಮನೆಯ ಹಿಂದೆ ದನಕ್ಕೆ ಮೇವು ಹಾಕಲು ಸ್ಥಳ ಬಿಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖ್ಯೆಃ 1-23 ರ ದಕ್ಷಿಣದಿಂದ ಉತ್ತರಕ್ಕೆ ಹೋಗುವ ರಸ್ತೆಯ ಪೂರ್ವಕ್ಕೆ ಆನೆ ಹೋಗುವ ದೊಡ್ಡ ಬಾಗಿಲು ಇದೆ ಎಂದರೆ ಸರಿ.

ಪ್ರತಿವಾದಿಯರ ಮನೆತನ ಸರಿಯಾಗಿದೆ ಎಂದರೆ ಸಾಕ್ಷಿ ಅವರ ಮನೆತನ ಕೆಟ್ಟದು ಎಂದು ನುಡಿಯುತ್ತಾರೆ. ಬಂಡಪ್ಪ ರವರ ಮಕ್ಕಳಾದ ಈರಪ್ಪ , ಸಂಗಪ ಮತ್ತು ತಿಪ್ಪಣ್ಣ ರವರು ಈಗ ಒಟ್ಟಿಗ ಇದ್ದಾರೆ ಅಥವಾ ಬೇರೆ ಆಗಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆ ಮತ್ತು ಪ್ರತಿವಾದಿ ಮನೆ ಮದ್ಯ 15 ಫೀಟ ಅಂತರ ಇದೆ. ಪ್ರತಿವಾದಿಯರ ಮನೆ ತನ ಕೆಟ್ಟದು ಎಂದು ಯಾವ ಅಧಾರದ ಮೇಲೆ ಹೇಳುತಿತದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾವು ಪ್ರತಿವಾದಿಯರಿಗೆ ಕಟ್ಟಿಗೆ ಹಾಕಲು ಜಾಗವನ್ನು ನೀಡಿರುತ್ತೇವೆ ಮತ್ತು ಈಗ ಸದರಿ ಜಾಗ ಅವರಿಗೆ ಸೇರಿದ್ದು ಎಂದು ಹೇಳುತ್ತಿದ್ದ ಕಾರಣ ಕೆಟ್ಟ ಮನೆತನ ಎಂದು ಹೇಳುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಟ್ಟಿಗೆಯನ್ನು ಪ್ರತಿವಾದಿಯರು ಎಷ್ಟು ವರ್ಷಗಳಿಂದ ಹಾಕುತ್ತಿದ್ದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ 15 ವರ್ಷಗಳಿಂದ ಹಾಕುತ್ತಿದ್ದಾರೆ ಎಂದು ನುಡಿಯುತ್ತಾರೆ.

ಮನೆ ಸಂಖ್ಯೆಃ 1-23 ಪಂಚಾಯತಿಯಲ್ಲಿ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಮನೆ ಸಂಖ್ಯೆಃ 1-23 ಪ್ರತಿವಾದಿಗೆ ಸಂಬಂಧಪಟ್ಟಮನೆ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ಕಾಟಕುಟುವ ಗಿರಿಣಿಯ ಪಶ್ಚಿಮ ದಿಕ್ಕಿಗೆ ಸಳವನ್ನು 3 ರಿಂದ 6ನೇ ಪ್ರತಿವಾದಿಯರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ಸದರಿ ಉಪಯಾೀಗಿಸುತ್ತಿರುವ ಸ್ದಳ ಉತ್ತರ ದಿಕ್ಕಿಗೆ 1 ಮತ್ತು 2ನೇ ಪ್ರತಿವಾದಿಯರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನಮಗೆ ಸೇರಿದ್ದು ಆದರೆ ಪ್ರತಿವಾದಿಯರು ಈಗ 15 ವರ್ಷಗಳಿಂದ ಕಬ್ಜೆ ಮಾಡಿದ್ದಾರೇ ಎಂದು ನುಡಿಯುತ್ತಾರೆ. ಈ ರೀತಿ 1 ರಿಂದ 6ನೇ ಪ್ರತಿವಾದಿಯರು ನಾಲ್ಕು ಭಾಗಗಳನ್ನಾ ಗಿ ಮಾಡಿ ಸದರಿ ಸ್ಥಳವನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ.

ಪ್ರತಿವಾದಿಯರು ಉಪಯೋಗಿಸುತ್ತಿರುವ ಹಾಳುಬಿದ್ದಿರುವ ಮನೆಯ ಪಶ್ಚಿಮ ದಿಕ್ಕಿಗೆ ಹಾಶಪ್ಪ ಮತ್ತು ಸಂಗಪ್ಪ ರವರ ಮನೆ ಇದೆ ಎಂದರೆ ಸರಿ. ಸದರಿ ಸ್ಥಳದ ದಕ್ಷಿಣಕ್ಕೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ, ಪೂರ್ವಕ್ಕೆ ಚಂದ್ರಶೇಖರ ರವರ ಮನೆಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಉತ್ತರ ದಿಕ್ಕಿಗೆ ನಿಂಬೆಣಪ್ಪ ಮತ್ತು ವೀರಭದ್ರಪ್ಪ ರವರ ಮನೆ ಇದೆ ಎಂದರೆ ಸರಿ. ಮೇಲೆ ಹೇಳಿರುವ ಚತುರ್ಸಿಮೆ ಸ್ಥಳ ಮನೆ ಸಂಖೆಃ 1-23 ಇದೆ ಎಂದರೆ ಸಾಕ್ಷಿ 1-22 ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತ ಮೌಲ್ಯಯುತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯ ಮೌಲ್ಯ ಎಷ್ಟು ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ 15 ರಿಂದ 16 ಲಕ್ಷ ಇದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ಮೋತಕಪಳ್ಳಿಯಿಂದ ಬಂದು ಗಣಾಪುರದಲ್ಲಿ ವಾಸವಿದ್ದಾರೆ ಎಂದು ತೋಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮುಖ್ಯವಿಚಾರಣೆಯ ಶಪಥ ಪತ್ರದಲ್ಲಿ ಮತ್ತು ವಾದಪತ್ರದ ಸಂಗತಿಗಳು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ ವಿರುದ್ದ ಪಂಚಾಯತಿ ಸದಸ್ಯರು ಕ್ರಿಮಿನಲ ಪ್ರಕರಣ ದಾಖಲಿಸಿರುವ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಜಾಗ ಹಾಗೂ ಮನೆ ಸಂಖ್ಯೇ 1-22 ಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮನೆ ಸಂಖ್ಯೆ: 1-23 ಕ್ಕೆ ಸಂಬಂದಪಟ್ಟಿದ್ದು ಇರುತ್ತದೆ ಮತ್ತು ದಾವಾ ಅಸ್ತಿಯಲ್ಲಿ ಯಾವುದೇ ಹಿತಾಸಕ್ತಿ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿದೇನೆ ಎಂದರೆ ಸರಿಯಲ್ಲ.

ಮನೆ ಸಂಖ್ಯೆ: 1-23 ಸಂಗಪ್ಪ ರವರ ಹೆಸರಿನಲ್ಲಿ ಪಂಚಾಯತಿ ದಾಖಲೆಗಳು ಇವೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿ ಇದ್ದರೆ ಅವರು ತೆಗೆದುಕೊಳ್ಳಲಿ ಎಂದು ನುಡಿಯುತ್ತಾರೆ. ಪಾಲು ಮಾಡಿಕೊಂಡ ಪ್ರಕಾರ ಸಂಗಪ್ಪನ ವಾರಸುದಾರರು ಪ್ರತ್ಯೇಕವಾಗಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖೆ: 1-23 ಹಾಗೂ ನನಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿ. ಮನೆ ಸಂಖ್ಯೆ: 1-23 ರ ವಿಸ್ತೀರ್ಣ 47 x 90 ಫೀಟ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಹಾಗೂ ಮನೆ ಸಂಖ್ಯೆ: 1-23 ಕ್ಕೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಪ್ರತಿವಾದಿಯರ ಜಾಗವನ್ನು ಕಬಳಿಸಲು ಮನೆ ಸಂಖೆ: 1-22 ಇದೆ ಎಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ದಾವೆ ನಾನು ಸಲ್ಲಿಸಿಲ್ಲ ನನ್ನ ತಂದೆ ಸಲಿಸಿದ್ದಾರೆ ಆದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖ್ಯೆ: 1-23 ರ ಮಾಲೀಕ ಮತ್ತು ಕಬ್ಜೆದಾರರು ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿ. ಮನೆ ಸಂಖ್ಯೆ: 1-22 ರ ವಿಸ್ತೀರ್ಣ ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲಿಸಿಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೇಗೆ ಓಡಾಡಲು ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಕಿವಿ ಕೇಳುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ನಿಪಿ 2 ನ್ನು ತಿದ್ದುಪಡಿ ಮಾಡಿ ನ್ಯಾಯಾಲಯದ ಮುಂದೆ ಬಂದರೆ ಅವರು ಮಾಡಿರುವ ತಿದ್ದುಪಡಿ ಗೊತ್ತಾಗುತ್ತದೆ ಎಂದು ತಿಳಿದು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಶಪಥ ಪತ್ರ ಸಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**